# ಮರಳಿ ಬಾಲ್ಯಕ್ಕೆ ಮಗುಚಬೇಕಿದೆ!

ನಾನೊಬ್ಬ ಸಾಮಾನ್ಯ ಮನುಷ್ಯ. ಜಪಾನಿನ 'ಶಿಕೊಕು' ಎಂಬ ದ್ವೀಪ ಭೂಮಿಯಲ್ಲಿ ಒಂದೆಡೆ ಬದುಕುತ್ತಿರುವವನು. ನನಗೆ ಮರಳಿ ಮಗುವಿನಂತಾಗಬೇಕೆಂಬ ಉತ್ಕಟವಾದ ಆಸೆ! ನಾನು ಮರುಳನಿರಬಹುದೆ? ಮನುಷ್ಯರೆಲ್ಲರೂ ಹೀಗೆ ಮಕ್ಕಳಂತಿರಬೇಕೆಂದು ಕೊಂಡಿರುವವನು ನಾನು. ನಾವು ಹೆಮ್ಮೆಪಡುವ ನಮ್ಮ ವಿಜ್ಞಾನ, ನಮ್ಮ ತಂತ್ರಜ್ಞಾನ, ನಮ್ಮ ಬುದ್ಧಿಮತ್ತೆ ನಮ್ಮನ್ನು ನಿಸರ್ಗದಿಂದ ಬಹುದೂರ ಒಯ್ದುಬಿಟ್ಟಿದೆ ಎನ್ನುವವನು ನಾನು. ವಿಜ್ಞಾನ, ಬುದ್ಧಿಮತ್ತೆ ಎಂದೆಲ್ಲ ನಾನು ಹೇಳುವಾಗ ನಾನು ಸೂಚಿಸುತ್ತಿರುವುದು– ಪುಸ್ತಕಗಳಿಂದ, ಅಂತರ್ಜಾಲದಿಂದ, ಪ್ರಯೋಗ ಶಾಲೆಗಳಿಂದ ಸಂಗ್ರಹಿಸಿಕೊಂಡ ಬುದ್ಧಿಮತ್ತೆಯನ್ನು ವಿಜ್ಞಾನವನ್ನು. ನಿಸರ್ಗದಲ್ಲಿಯೇ ಒಂದು ವಿಜ್ಞಾನವಿದೆ. ಒಂದು ಬುದ್ಧಿಮತ್ತೆ ಇದೆ. ಅದು ಸಹಜವಾದ್ದು. ನಿಜವಾದ್ದು. ಅದು ತನ್ನಂತೆಯೇ ಪೂರ್ಣವಾದದ್ದು. ಅದರ ಬಗೆಯೇ ಬೇರೆ. ಅದನ್ನು ಮರಳಿ ಪಡೆಯಬೇಕೆನ್ನುವವನು ನಾನು. ಅದು ಪುಸ್ತಕ ಇತ್ಯಾದಿ ಮೂಲಗಳಿಂದ ಬರುವ ಜ್ಞಾನಕ್ಕಿಂತ ಬೇರೆಯಾದ್ದು.

ನಿಸರ್ಗದಲ್ಲಿ ಅತಿ ಸಣ್ಣ ಸೂಕ್ಷ್ಮಾಣುಜೀವಿಗಳಿಂದ ಹಿಡಿದು ಎಲ್ಲ ಜೀವಜಾತಕ್ಕೂ ತಮ್ಮ ಬದುಕನ್ನು ನಿರ್ವಹಿಸುವುದಕ್ಕೆ ಬೇಕಾದ ನೈಸರ್ಗಿಕವಾದ ತಿಳಿವಳಿಕೆ ಇದೆ. ಆ ತಿಳಿವಳಿಕೆಯಲ್ಲಿ ಸಹಜತೆ ಇದೆ. ಕೃತಕತೆ ಇಲ್ಲ. ಆದರೆ ಮನುಷ್ಯರನ್ನು ನೋಡಿ. ಮನುಷ್ಯರ ಮೆದುಳು ಯಾಕೆ ಹೀಗೆ ವಿಕೃತವಾಗಿದೆ? ನಾನು ಬುದ್ಧಿವಂತ ನೀನು ದಡ್ಡ ಎಂದು ಹೇಳುವುದು ಮನುಷ್ಯರು ಮಾತ್ರ. ನಾನು ಶ್ರೇಷ್ಠ, ನೀನು ಕನಿಷ್ಠ ಎನ್ನುವುದು ಮನುಷ್ಯರು ಮಾತ್ರ. ನಾನು ಸುರೂಪಿ, ನೀನು ಕುರೂಪಿ ಎನ್ನುವುದು ಮನುಷ್ಯ ಮಾತ್ರ. ನಾನು ಶ್ರೀಮಂತ, ನೀನು ಬಡವ ಎನ್ನುವುದು ಮನುಷ್ಯರು ಮಾತ್ರ. ಹೌದು; ಆಹಾರಕ್ಕಾಗಿ, ಬೇಟೆಕ್ಕಾಗಿ ಪ್ರಾಣಿಗಳು ಹೋರಾಡುತ್ತವೆ ನಿಜ– ಅದು ಅಲ್ಲಿಗೆ ಮುಗಿಯಿತು. ಆದರೆ ಗುಂಪು ಕಟ್ಟಿಕೊಂಡು, ಸೇನೆಗಳನ್ನು ಕಟ್ಟಿಕೊಂಡು ಅದಕ್ಕಾಗಿ ತಲೆ ತೊಳೆಯುವ ಮಾತುಗಾರಿಕೆಯನ್ನು ಕಲಿತುಕೊಂಡು, ಮಾರಕಾಸ್ತ್ರಗಳನ್ನು ಸಂಗ್ರಹಿಸಿಕೊಂಡು ತಮ್ಮ ಕುಲವನ್ನೇ ನಾಶಮಾಡುತ್ತ ಹೋಗುವವರು ಮನುಷ್ಯರು ಮಾತ್ರ. ಸಂತತಿಯಿಂದ ಸಂತತಿಗೆ ಜನಾಂಗದ್ವೇಷವನ್ನು ಸಾಗಿಸುತ್ತ ಹೋಗುವವರು ಮನುಷ್ಯರು ಮಾತ್ರ.

ಮನುಷ್ಯರಿಗೆ ಬಿಡುಗಡೆ ಎನ್ನುವುದು ಒಂದು ಇರುವುದಾದರೆ ಅದು ಮರಳಿ ನಿಸರ್ಗ ಸಹಜವಾಗಿ ಬದುಕುವ ದಾರಿಯನ್ನು ಕಂಡುಕೊಳ್ಳುವುದರಿಂದ ಮಾತ್ರ. ಕೃತಕ ಜೀವನವನ್ನೇ ರೂಢಿಸಿಕೊಂಡವರಿಗೆ ಕೃತಕವನ್ನೇ ಸಹಜವೆನ್ನುವವರಿಗೆ ನನ್ನ ಮಾತುಗಳು ಇಷ್ಟವಾಗುವುದು ಕಡುಕಷ್ಟ. ಬಲ್ಲೆ. ಆದರೆ ನಿಸರ್ಗವನ್ನು ಈಗಿನ ಅಸಹನೀಯ ಸ್ಥಿತಿಗೆ ತಲುಪಿಸಿರುವವರು ನಾವೇ ಆಗಿರುವುದರಿಂದ ಇದನ್ನು ಮರಳಿ ಸರಿಪಡಿಸುವುದರಲ್ಲಿ ನಮ್ಮ ಹೊಣೆಗಾರಿಕೆಯನ್ನು ನಾವು ಹೊರಲೇಬೇಕು.

ವಿಶೇಷ ಜ್ಞಾನ– Specialisation ಎನ್ನುತ್ತಾರಲ್ಲ– ಅದೊಂದು ದೊಡ್ಡ ಬೇಜಾರಿನ ಸಂಗತಿ– Boring– ಎನಿಸುತ್ತದೆ ನನಗೆ. ಯಾವುದೇ ವಿಷಯಕ್ಕೆ ನೀವು ಅತಿಯಾಗಿ ನಿಮ್ಮ ಬುದ್ಧಿಯನ್ನು ಉಪಯೋಗಿಸಿದರೆ ಆ ವಿಷಯವು ಅದು ಹೇಗಿದೆಯೋ ಹಾಗೆ ಇರುವುದಕ್ಕಿಂತ ಹೆಚ್ಚು ಗಹನವಾಗಿ, ಗಂಭೀರವಾಗಿ; Seriond ಆಗಿ, ಜಟಿಲವಾಗಿ ಕಾಣಿಸತೊಡಗುವುದು. ಎಲ್ಲದರಿಂದ ಬೇರ್ಪಡಿಸಿ ಅದನ್ನು ಮಾತ್ರ ನೋಡುವುದರಿಂದ ಹಾಗೆ ಅದು ಜಟಿಲವಾಗಿ ಮಹತ್ವದ್ದಾಗಿ ಕಾಣಿಸುವುದಲ್ಲದೆ ಇಲ್ಲದಿದ್ದರೆ ಹಾಗೆ ಕಾಣಿಸಲಾರದು. ಅದು ಎಲ್ಲದರ ಜತೆಗಿದೆ. ಎಲ್ಲದರ ಜತೆ ಒಂದಾಗಿದೆ. ಅದನ್ನು ಹಾಗೆಯೇ ನೋಡಬೇಕು. ಬೇರ್ಪಡಿಸಿ ಅಲ್ಲ. ನಾವು ಹೇಗೆ ನೋಡುತ್ತೇವೋ ಹಾಗೆ ಕಾಣಿಸುತ್ತದೆ ಎನ್ನುವುದು ಇದನ್ನೇ.

ನನ್ನ ಇಪ್ಪತ್ತೈದನೆಯ ವಯಸ್ಸಿನ ತನಕ ನಾನೊಬ್ಬ ಆಧುನಿಕ ವಿಜ್ಞಾನವನ್ನು ಅಧ್ಯಯನ ಮಾಡಿದ ಕೀಟಶಾಸ್ತ್ರ ವಿಶೇಷಜ್ಞನಿದ್ದೆ. ಆದರೆ ಆಗ ನನಗೆ ನಿಸರ್ಗದ ಸಹಜ ಸೌಂದರ್ಯವೇ ಬೋಧೆಯಾಗಲಿಲ್ಲ. ನಾನೊಬ್ಬ ವಿಶೇಷಜ್ಞನಾದ ಡಾಕ್ಟರ್–ವೈದ್ಯನಾಗಿದ್ದರೆ, ನಿಸರ್ಗದ ಸಹಜ ಆರೋಗ್ಯ ಪೂರ್ಣ, ವಾತ್ಸಲ್ಯ ಮಮತೆಯನ್ನು ತಿಳಿಯಲು ಶಕ್ತನಾಗುತ್ತಿರಲಿಲ್ಲವೆಂದೇ ನನಗೆ ಅನಿಸುತ್ತದೆ. ಏಕೆಂದರೆ ನಮ್ಮ ವಿಶೇಷಜ್ಞತೆಯ ನಡೆ ನಿಸರ್ಗದ ನಡೆಗಿಂತ ಬೇರೆಯಾಗಿದೆ. ನಾವು ನಿಸರ್ಗಕ್ಕೆ ಅಪಚಾರವೆಸಗುತ್ತ ತಪ್ಪೆಸಗುತ್ತ ಹೋಗುವೆವು. ಮತ್ತು ಆ ತಪ್ಪನ್ನು ಸರಿಪಡಿಸದೆ ಹಾಗೆಯೇ ಬಿಟ್ಟುಬಿಡುವೆವು. ತಪ್ಪೆಂದು ತಿಳಿದರೆ ತಾನೆ ಅದನ್ನು ಸರಿಪಡಿಸುವ ಮಾತು? ಆದರೆ ನಮ್ಮ ನಿರಂತರ ತಪ್ಪುಗಳಿಗೆ ನಿಸರ್ಗ ತನ್ನ ಪ್ರತಿಕ್ರಿಯೆ ನೀಡಿದಾಗ, ಆ ಪ್ರತಿಕ್ರಿಯೆ ನಮಗೆ ಅಪಾಯಕಾರಿ ಎಂದು ಕಂಡುಬಂದಾಗ ಮತ್ತೆ ಹೇಗೋ ಕಷ್ಟಪಟ್ಟು ಆದ ತಪ್ಪನ್ನು ಸರಿಪಡಿಸಲು ಪರಿಶ್ರಮಪಡುವೆವು. ಇದರಲ್ಲಿ ತತ್ಕಾಲಕ್ಕೆ ಯಶಸ್ವಿಯಾದರೆ ಇದೊಂದು ದೊಡ್ಡ ಸಾಧನೆ ಎಂದು ಬೀಗುವೆವು. ವಿಚಿತ್ರ!

ಒಂದು ಕತೆ ಕಟ್ಟಿ ಹೇಳುವುದಾದರೆ– ಓರ್ವ ವಿಜ್ಞಾನಿ ಇದ್ದ. ಬಹಳ ಓದುತ್ತಿದ್ದ. ಅಧ್ಯಯನ ಮಾಡುತ್ತಿದ್ದ. ರಾತ್ರಿ ಹಗಲೆನ್ನದೆ ಪುಸ್ತಕಗಳ ಸಂಪರ್ಕದಲ್ಲಿ ಇರುತ್ತಿದ್ದ. ಇದರಿಂದೆಲ್ಲ ಅವನಿಗೆ ಸಮೀಪ ದೃಷ್ಟಿ ದೋಷ ಉಂಟಾಯಿತು. ಅಂದರೆ ಕಣ್ಣಿಗೆ ಹತ್ತಿರ ಹಿಡಿದಾಗ ಮಾತ್ರ ಅಕ್ಷರಗಳು ಕಾಣಿಸುವ ಪರಿಸ್ಥಿತಿ. ಆದರೆ ಇಷ್ಟೆಲ್ಲ ಕಷ್ಟಪಟ್ಟು ಅವನು ಓದುತ್ತಿದ್ದ ವಿಷಯವೇನೆಂದರೆ– ಸಮೀಪ ದೃಷ್ಟಿದೋಷವನ್ನು ನಿವಾರಿಸುವ ಕನ್ನಡಕದ ಗಾಜುಗಳನ್ನು ತಯಾರಿಸುವುದು ಹೇಗೆ ಎಂಬ ಕುರಿತೇ ಆಗಿತ್ತು. ಹೇಗಿದೆ! ನಮ್ಮ ಆಧುನಿಕತೆಯ ಕತೆ ಹೀಗೇ ಆಗಿದೆ.

'ಶ್ರಮ' ಎನ್ನುವ ಪದ ನನಗೆ ಅಷ್ಟೇನೂ ಇಷ್ಟವಾದ್ದಲ್ಲ. ನಿಸರ್ಗವನ್ನು ನೋಡಿ ಯಾವ ಜೀವ ಜಾತವೂ ಬದುಕಲು ಎಷ್ಟು ಬೇಕೋ ಅದಕ್ಕಿಂತ ಹೆಚ್ಚಿನ ಕೆಲಸವನ್ನೇನೂ ಮಾಡುವುದಿಲ್ಲ. ಬದುಕಲು ಅಗತ್ಯವಾದಷ್ಟು ಕೆಲಸವು ನಿಜವಾಗಿ 'ಕೆಲಸ'; 'ಶ್ರಮ' ಎಂದು ಕರೆಯಲ್ಪಡಬೇಕಾದುದಲ್ಲ. ಅದು ಬದುಕಿನ ಚಟುವಟಿಕೆಯೇ. ಉಳಿದಂತೆಲ್ಲ– ಪಶುಪಕ್ಷಿಗಳಿಗೆ ಎಂಥ ವಿರಾಮ! ಎಂಥ ಆಟ! ಎಂಥ ಲೀಲೆ! ಬದುಕಿನ ಎಂಥ ಆನಂದ!

ನಮಗೇನಾಗಿದೆ? ಮೂಗಿಗೆ ಕವಡೆ ಕಟ್ಟಿಕೊಂಡಂತೆ ದುಡಿಯುವುದಕ್ಕೆ? ಸರಳ ಜೀವನದ ಅರ್ಥಪೂರ್ಣತೆಯನ್ನು ಮನಗಾಣಲು ನಮಗೇಕೆ ಕಷ್ಟವಾಗುತ್ತಿದೆ? ಅಥವಾ ನಮ್ಮ 'ವಿರಾಮ'ಕ್ಕೆ ನಾವೇ ಭಯಪಡುತ್ತಿರುವೆವೆ? 'ಮಗು'ವಿಗೆ ವಿರಾಮದ ಭಯವಿಲ್ಲ. ಅದು ವಿರಾಮವೇ ಮೈವೆತ್ತಂತೆ ಇರುವ ಜೀವ. ನನಗೆ ಮರಳಿ ಮಗುವಿನಂತಾಗ ಬೇಕಿದೆ!

ಇದು ನೈಸರ್ಗಿಕ ಕೃಷಿಯ ಪ್ರತಿಪಾದಕ ಋಷಿತುಲ್ಯ 'ಮಸನೊಬು ಫುಕುವೋಕಾ' ವಿಚಾರ ಧಾರೆ.

■ ತೋಷ

## ಮಾತೇ ಮುತ್ತು

★ ವಿಚಾರಗಳು ಅಮೂರ್ತವಲ್ಲ. ಗಿಡಕ್ಕೆ ನೀರೆರೆದು ಬೆಳೆಸಿದಂತೆ ವಿಚಾರಗಳನ್ನೂ ಬೆಳೆಸಬೇಕು. ಇಲ್ಲವಾದಲ್ಲಿ ಅದು ಸಾಯುತ್ತದೆ.
-ಬಾಬಾಸಾಹೇಬ್ ಅಂಬೇಡ್ಕರ್

★ ಅಹಂಕಾರವಿಲ್ಲದ ಮನುಷ್ಯ ಯಾವ ಧರ್ಮಗ್ರಂಥವನ್ನೂ ಓದದೆ, ಯಾವ ಮಂದಿರವನ್ನೂ ಪ್ರವೇಶಿಸದೆ ಮೋಕ್ಷ ಪಡೆಯಬಹುದು.
- ಸ್ವಾಮಿ ವಿವೇಕಾನಂದ

★ ಕೆಲಸವಿಲ್ಲದೆ ಕ್ಷಣ ಕಳೆದರೂ ಅದು ಕಳ್ಳತನ ಮಾಡಿದಂತೆ.
-ಮಹಾತ್ಮ ಗಾಂಧೀಜಿ

★ ಶ್ರೀಮಂತರು ಪರಸ್ಪರ ಯುದ್ಧ ಮಾಡುವಾಗ ಬಡವರು ಅದಕ್ಕಾಗಿ ಸಾಯುತ್ತಾರೆ.
-ಜೀನ್ ಪಾಲ್ ಸಾರ್ತ್ರೆ

★ ನನ್ನಲ್ಲಿರುವ ಅತ್ಯುತ್ತಮವಾದುದನ್ನು ಹೊರತೆಗೆಯುವವನೇ ನನ್ನ ಅತ್ಯುತ್ತಮ ಗೆಳೆಯ.
-ಹೆನ್ರಿ ಫೋರ್ಡ್

★ ಏನೆಲ್ಲ ಕೆಲಸಗಳು ಆಗಿದೆ ಎನ್ನುವುದನ್ನು ನಾನು ನೋಡುವುದಿಲ್ಲ; ಏನೆಲ್ಲ ಕೆಲಸಗಳು ಬಾಕಿ ಇದೆ ಎನ್ನುವುದನ್ನು ನೋಡುತ್ತೇನೆ.
-ಗೌತಮ ಬುದ್ಧ

★ ಹೇಳಬೇಕಾದದ್ದು ಏನೋ ಇದೆ ಎಂದೇ ಬುದ್ಧಿವಂತರು ಮಾತನಾಡುತ್ತಾರೆ; ಏನಾದರೂ ಹೇಳಬೇಕು ಎಂದು ಮೂರ್ಖರು ಮಾತನಾಡುತ್ತಾರೆ.
-ಪ್ಲೆಟೊ

★ ಉತ್ತರ ಬೇಕೆಂಬ ಆಸೆ ಇಲ್ಲದಿದ್ದರೆ ಸಮಸ್ಯೆ ಸುಲಭವಾಗಿ ಅರ್ಥವಾಗುತ್ತದೆ.
-ಜಿಡ್ಡು ಕೃಷ್ಣಮೂರ್ತಿ

★ ಕಣ್ಣಿದ್ದೂ ದೂರದೃಷ್ಟಿ ಇಲ್ಲದಿರುವುದು, ಕುರುಡರಾಗಿರುವುದಕ್ಕಿಂತ ಕೆಟ್ಟದ್ದು.
-ಹೆಲೆನ್ ಕೆಲ್ಲರ್